ಅಸಲು ದಾವೆ ನಂ.118/2019

ಪಿ.ಡಬ್ಲೂಃ 1- ಭಾರತಿ ಕೋಂ ಮುನಿಯಪ್ಪ

ದಿನಾಂಕಃ 19/02/2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಸಂಖ್ಯೆ3(ಎ) ಮತ್ತು (ಬಿ) ರವರ ಪರ ಶ್ರೀ ಎಂ.ಎನ್. ವಕೀಲರಿಂದ**

1. ನಾನು 3 ನೇ ತರಗತಿವರೆಗೆ ಓದಿರುತ್ತೇನೆ. 2 ಮತ್ತು 3 ನೇ ವಾದಿಯರು ಪದವಿ ಓದಿರುತ್ತಾರೆ. ನಾನು ಹುಟ್ಟಿದ ವರ್ಷ 1973 ಆದರೆ ನನಗೆ ದಿನಾಂಕ ಮತ್ತು ತಿಂಗಳು ನೆನಪಿರುವುದಿಲ್ಲ. ನಿಪಿ-1 ಮತ್ತು 2 ವಂಶವೃಕ್ಷದಲ್ಲಿ ಬರೆದಿರುವ ಮಾಹಿತಿಯು ಸರಿಯಾಗಿ ಇರುತ್ತದೆ. ನಾವು ವಾದ ಪತ್ರದ 2 ನೇ ಪ್ಯಾರಾದಲ್ಲಿ 1 ನೇ ಪ್ರತಿವಾದಿಯು ದಾವಾ ಐಟಂ ನಂ.1 ರಿಂದ 3 ಸ್ವತ್ತುಗಳನ್ನು 2 ರಿಂದ 4 ನೇ ಪ್ರತಿವಾದಿಯರ ಹತ್ತಿರ ಅಡಮಾನ ಮಾಡಿರುವ ಬಗ್ಗೆ ನಮಗೆ ತಿಳಿಸಿದರು ಎಂದು ನಾವು ಹೇಳಿದ್ದು 1 ನೇ ಪ್ರತಿವಾದಿಯು ಸದರಿ ಜಮೀನುಗಳ ಸ್ವಾಧೀನವನ್ನು ಲೀಜ್ ಮೇಲೆ ಕೊಟ್ಟು ಜಮೀನುಗಳನ್ನು ಅಡಮಾನಕ್ಕೆ ಕೊಟ್ಟಿರುತ್ತಾರೆ. 1 ನೇ ಪ್ರತಿವಾದಿಯು ಯಾವ ದಿನಾಂಕದಂದು ಮತ್ತು ಎಷ್ಟು ಮೊತ್ತಕ್ಕೆ ಮತ್ತು ಎಷ್ಟು ವರ್ಷಗಳಿಗೆ ಸದರಿ ಜಮೀನುಗಳನ್ನು ಅಡಮಾನಕ್ಕೆ ಮತ್ತು ಲೀಜ್ ಮೇಲೆ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈ ಎಲ್ಲಾ ವಿಚಾರಗಳನ್ನು ನಾನು 1 ನೇ ಪ್ರತಿವಾದಿಯ ಹತ್ತಿರ ಕೇಳಿರುವುದಿಲ್ಲ. ನಾವು ಈ ದಾವೆ ದಾಖಲಿಸುವುದಕ್ಕೂ ಮುಂಚೆ 3 ನೇ ಪ್ರತಿವಾದಿಗೆ ದಾವಾ ಐಟಂ ನಂ.2 ಸ್ವತ್ತಿಗೆ ಸಂಬಂಧಿಸಿ 1 ನೇ ಪ್ರತಿವಾದಿಯು ಮಾಡಿರುವ ಅಡಮಾನ ಅಥವಾ ಲೀಜ್ ಕರಾರನ್ನು ರದ್ದು ಮಾಡಿ ಕೊಡಬೇಕು ಎಂದು ಹೇಳಿ 1 ನೇ ಪ್ರತಿವಾದಿಯು ಯಾವುದೇ ನೋಟಿಸ್ ಕೊಟ್ಟಿರುವುದಿಲ್ಲ. ಅದೇ ರೀತಿ ನಾವೂ ಸಹ ಈ ದಾವೆ ದಾಖಲಿಸುವುದಕ್ಕೂ ಮುಂಚೆ 3 ನೇ ಪ್ರತಿವಾದಿಗೆ ಅಡಮಾನದ ಹಣವನ್ನು ಪಡೆದುಕೊಂಡು ದಾವಾ ಐಟಂ ನಂ.2 ಸ್ವತ್ತಿನ ಸ್ವಾಧೀನವನ್ನು ನಮಗೆ ಬಿಟ್ಟು ಕೊಡಿ ಎಂದು ಹೇಳಿ ಯಾವುದೇ ನೋಟಿಸ್ ಕೊಟ್ಟಿರುವುದಿಲ್ಲ.

2. ನಮ್ಮ ಮಾವ ದೊಡ್ಡ ಪಾಪಣ್ಣ ಮತ್ತು ಅವರ ಸಹೋದರರ ಮಧ್ಯ ವಿಭಾಗ ಆಗಿರುತ್ತದೆ ಎಂದು ನಾವು ವಾದ ಪತ್ರದಲ್ಲಿ ಹೇಳಿದ್ದು ಈ ಬಗ್ಗೆ ನಾವು ವಿಭಾಗ ಪತ್ರವನ್ನು ಹಾಜರುಪಡಿಸಿರುತ್ತೇವೆ. ಸದರಿ ವಿಭಾಗ ಪತ್ರದಲ್ಲಿ ದೊಡ್ಡ ಪಾಪಣ್ಣ ಮತ್ತು ಅವರ ಸಹೋದರರಿಗೆ ಯಾವ ಸರ್ವೆ ನಂಬರ್ ದಲ್ಲಿ ಎಷ್ಟು ಜಮೀನು ಬಂದಿರುತ್ತದೆ ಎಂದು ಬರೆಯಲಾಗಿರುತ್ತದೆಯೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ನಾವು ಈ ದಾವೆಯಲ್ಲಿ ಹಾಜರುಪಡಿಸಿರುವ ದಾವಾ ಸ್ವತ್ತುಗಳ ಪಹಣಿಗಳಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ. ನಿಪಿ-23, 24 ಮತ್ತು 26 ರ ಪ್ರಕಾರ ದಾವಾ ಐಟಂ ನಂ.2 ಸ್ವತ್ತು 3 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಪಹಣಿಗಳು ತಪ್ಪಾಗಿ ದಾಖಲಾಗಿರುತ್ತವೆ ಎಂದು ನಾವು ಅವುಗಳನ್ನು ಕಂದಾಯ ಇಲಾಖೆಯಲ್ಲಿ ಪ್ರಶ್ನಿಸಿರುವುದಿಲ್ಲ.

3. ನಿಪಿ-31 ಕ್ರಯ ಪತ್ರವು ಯಾರ ಮಧ್ಯ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಕ್ರಯ ಪತ್ರವನ್ನು 1 ನೇ ಪ್ರತಿವಾದಿ ಹಾಗೂ ಅವರ ಮಕ್ಕಳಾದ ಮುನಿಯಪ್ಪ ಮತ್ತು ನಾರಾಯಣಪ್ಪ ರವರು ಸೇರಿ ದಾವಾ ಐಟಂ ನಂ.2 ಸ್ವತ್ತನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 3 ನೇ ಪ್ರತಿವಾದಿಯು ಅದನ್ನು ಸೃಷ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಮತ್ತು 1 ನೇ ಪ್ರತಿವಾದಿಯು ಅನ್ಯೋನ್ಯವಾಗಿರುತ್ತೇವೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
**1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ**
**ಕೆಜಿಎಫ್**